ಬೆಲೆಯನ್ನು ಕೊಟ್ಟರು. ಇವತ್ತು ಆ 10 ರೂಪಾಯಿ ಕೊಟ್ಟರೂ ಕೂಡ ಅವನಿಗೆ ಅಸಲು ಆಗುವುದಿಲ್ಲ. ಇನ್ನೂ ನಷ್ಟದಲ್ಲಿಯೇ ಇರುತ್ತಾನೆ. ಕನಿಷ್ಟ 20 ರೂಪಾಯಿಗಳಂತೆ ಒಂದು ಕೆ.ಜಿ.ಗೆ ಬೆಂಬಲ ಬೆಲೆಯನ್ನು ಕೊಡತಕ್ಕಂಥ ಆಲೋಚನೆಯನ್ನು ಘನ ಸರ್ಕಾರದವರು ಮಾಡಿದರೆ ರೇಷ್ಮೆ ಕೃಷಿಯನ್ನು ಅವಲಂಬಿಸಿರತಕ್ಕಂಥ ರೈತನ ನೆರವಿಗೆ ಬಂದಂತೆ ಆಗುತ್ತದೆ. ಇದನ್ನು ಬಹಳ ದಿವಸಗಳ ಕಾಲ ಮಾಡಬೇಕಾಗಿಲ್ಲ. ಬಹುಶಃ ಒಂದು 2–3 ತಿಂಗಳು ರೈತರ ನೆರವಿಗೆ ಬಂದರೆ ಮಾರುಕಟ್ಟೆ ಸುಧಾರಿಸುತ್ತದೆ ಎನ್ನುವ ವಿಶ್ವಾಸ ಇದೆ. ಹೋದ ಸಲ ಮಾಡಿದಾಗಲೂ ಸಹ ಅಂಥದ್ದೇ ಪರಿಸ್ಥಿತಿ ಉದ್ಭವವಾಗಿತು. ಅದ್ದರಿಂದ ತಮ್ಮ ಮುಖೇನ ಘನ ಸರ್ಕಾರದವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ತೀರಾ ಕಷ್ಟದಲ್ಲಿರತಕ್ಕಂಥ ರೇಷ್ಮೆ ಕೃಷಿ ರೈತನಿಗೆ ತಾವು ಈ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಅವರ ನೆರವಿಗೆ ಬರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಈ ದಿವಸವೇ ಅಧಿಕಾರಿಗಳಿಗೆ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ. ಪ್ರಾಯಶಃ ಮಧ್ಯಾಹ್ನದ ಒಳಗಾಗಿ ಅಥವಾ ನಾಳೆ ಬೆಳಿಗ್ಗೆ ತಮಗೆ ವರದಿಯನ್ನು ಕಳುಹಿಸಿ ಕೊಡುತ್ತೇನೆ.

ಇ) ವಿಷಯ: ಗ್ರಾಮೀಣ ಕೃಪಾಂಕದಡಿ ನೇಮಕಾತಿಯಾದವರ ಬಗ್ಗೆ

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಕೃಪಾಂಕವನ್ನು ನಮ್ಮ ಹಳ್ಳಿಯ ಹುಡುಗರಿಗೆ ಸರ್ಕಾರಿ ನೌಕರಿ ಸಿಗುವುದಿಲ್ಲವೆಂದು ಬಹಳ ಕಷ್ಟಪಟ್ಟು 10 ಪರ್ಸೆಂಟ್ ಕೃಪಾಂಕ ಕೊಡುವ ವ್ಯವಸ್ಥೆಯನ್ನು ಮಾಡಿದ್ದೆವು, ಅದರ ಮೇಲೆ 14,000 ಜನರಿಗೆ ನೌಕರಿಯಾಗಿತ್ತು, ನಂತರ ಅದು ಕೋರ್ಟಿಗೆ ಹೋಗಿ ಸ್ಟೇ ಆಯಿತು. ಮುಂದೆ ಸರ್ಕಾರದವರು ಏನೋ ಒಂದು ಮಾಡಿಕೊಂಡು ಅವರನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಮಾಡಿದ್ದರು, ದುರ್ದೈವದಿಂದಬೇರೆಡೆ ಎಲ್ಲಾ ಹಾಜರಾದರು, ನಮ್ಮ ಧಾರವಾಡ ಡಿಡಿಪಿಐ ಆಫೀಸ್‌ನವರು, ಅದೇನು ಉದ್ದೇಶದಿಂದ ದುಡ್ಡು ಮಾಡಬೇಕೆಂದು ಮಾಡಿದ್ದರೊ, ತಡ ಮಾಡಿ ಅವರಿಗೆ ಅರ್ಡರ್ ಕೊಡದಿದ್ದಕ್ಕೆ ಸ್ಟೇ ತಂದರೂ ಕೂಡ ಇವರು ಅರ್ಡರ್ ಕೊಡಲಿಲ್ಲ. ಕೆಲವರು ಬೇರೆ ಜಿಲ್ಲೆಗಳಲ್ಲಿ ಅದೇ ವೇಳೆಯಲ್ಲಿದ್ದವರು ಹಾಜರಾಗಿದ್ದಾರೆ, ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿ ಆ ನೌಕರದಾರರು ಯಾರೂ ಹಾಜರಾಗದ ತಪ್ಪಿಗೆ ಆ ಡಿಡಿಪಿಐ ಆಫೀಸ್‌ನ ಅಧಿಕಾರಿಗಳು ಕಾರಣ, ಆ ಕಾರಣದಿಂದ ಅವರೆಲ್ಲರೂ ಇವತ್ತು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ತಯಾರಾಗಿ ನಿಂತಿದ್ದಾರೆ. ಅದುದರಿಂದ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಅವರಿಗೂ ಕೂಡ ತೀವ್ರವಾಗಿ ಹಾಜರಾತಿ ಮಾಡಿಕೊಳ್ಳಿ, ಒಂದು ವೇಳೆ ಇಲ್ಲಿ ಆಗಲಿಲ್ಲವೆಂದರೆ ಅವರನ್ನು ಬೇರೆ ಇಲಾಖೆಯಲ್ಲಿ ಸಧ್ಯ ಅವರನ್ನು ಹೊಂದಾಣಿಕೆ ಮಾಡಿ, ಮುಂದೆ ಸುಪ್ರೀಂ ಕೋರ್ಟ್‌ನಲ್ಲಿ ನಿರ್ಣಯವಾದ ಮೇಲೆ ಮಾಡುತ್ತೀರಾ ಇಲ್ಲದಿದ್ದರೆ ಖಂಡಿತವಾಗಿಯೂ ಹೇಳುತ್ತೇನೆ 180 ಜನ ಡಿಡಿಪಿಐ ಆಫೀಸ್‌ನಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸಂಪೂರ್ಣವಾಗಿ ಅದು ಡಿಡಿಪಿಐನವರ ತಪ್ಪು, ಅವರಿಗೂ ಕೂಡ ಅದೇ ವೇಳೆಯಲ್ಲಿ ಅರ್ಡರ್ ಕೊಟ್ಟಿದ್ದರೆ ಮುಗಿದುಹೋಗುತ್ತಿತ್ತು. ಅವರು ಕೊಡಲಿಲ್ಲ. ಅವರು ದುಡ್ಡು ಕೊಡಬೇಕೆಂದು ಆ ರೀತಿಮಾಡಿದರೆಂದು ಕಾಣುತ್ತದೆ. ಆ ಕಾರಣದಿಂದ ಆ ಡಿಡಿಪಿಐ ಮೇಲೆ

ಕ್ರಮ ತೆಗೆದುಕೊಳ್ಳುತ್ತೀರಾ ಹೇಗೆ ಎನ್ನುವುದನ್ನು ಕೂಡ ಇವತ್ತು ಮಾನ್ಯ ಸರ್ಕಾರದವರು ನನಗೆ ಉತ್ತರದಲ್ಲಿ ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಅಮರಣಾಂತ ಉಪವಾಸ ಕುಳಿತವರಲ್ಲಿ ಒಂದಿಬ್ಬರ ಆರೋಗ್ಯ ಹದಗೆಟ್ಟು, ಗಂಭೀರವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ, ಇದು ಅಲ್ಲಿನ ಡಿಡಿಪಿಐನವರ ಮಿಸ್ಟೇಕ್‌ನಿಂದಾಗಿ ಆಗಿದೆ, ದಯವಿಟ್ಟು ಇದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸದಸ್ಯರು ಬಹಳ ಗುರುತರವಾದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಈ ರೀತಿ ಧಾರವಾಡ ಜಿಲ್ಲೆಯಲ್ಲಿ ಅಷ್ಟೇ ಅಲ್ಲ ರಾಜ್ಯದ ಬೇರೆಡೆಯಲ್ಲಿ ಅಲ್ಲಿ ಇಲ್ಲಿ ಇಂತಹ ಪ್ರಕರಣಗಳಾಗಿದ್ದಾವೆ. ಇದರ ಜೊತೆಗೆ ಆರೋಗ್ಯ ಇಲಾಖೆಯಲ್ಲಿ ದಿನಗೂಲಿ ಮೇಲೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ಆ ಸಮಸ್ಯೆಯನ್ನು ಬಗೆಹರಿಸತಕ್ಕಂಥದ್ದರ ಬಗ್ಗೆಯೂ ಕೂಡ ಸರ್ಕಾರದ ಗಮನದಲ್ಲಿದೆ. ಅದನ್ನೂ ಕೂಡ ನಾವು ಪರಿಶೀಲನೆ ಮಾಡುತ್ತಿದ್ದೇವೆ. ಗ್ರಾಮೀಣ ಕೃಪಾಂಕಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 6–5–2003ರಂದು ನೀಡಿದ ಆದೇಶದ ಹಿನ್ನೆಲೆಯಲ್ಲಿ ಸೇವೆಯಿಂದ ತೆಗೆದುಹಾಕಲ್ಪಟ್ಟ ಗ್ರಾಮೀಣ ಕೃಪಾಂಕ ಅಭ್ಯರ್ಥಿಗಳನ್ನು ಮಾನವೀಯತೆಯ ದೃಷ್ಟಿಯಿಂದ ಒಂದು ಬಾರಿಯ ಕ್ರಮವಾಗಿ ಮರುನೇಮಕಾತಿ ಮಾಡಲು ದಿನಾಂಕ: 12.11.2003, ಅಧಿಸೂಚನೆ ಸಂಖ್ಯೆ:ಡಿಪಿಎಆರ್:58:2003 ರ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವೆಗಳು ಗ್ರಾಮೀಣ ಕೃಪಾಂಕದ ಸೌಲಭ್ಯದೊಂದಿಗೆ ನೇಮಕಾತಿ ಹೊಂದಿರುವ ನೌಕರರ ವಿನತೆ ವಿಶೇಷ ನಿಯಮಗಳು 2003 ಅನ್ನು ಹೊರಡಿಸಲಾಗಿದ್ದು, ಈ ನಿಯಮಗಳು ದಿನಾಂಕ: 12.11.2003 ರಿಂದ ಜಾರಿಗೆ ಬಂದಿದೆ. ಶ್ರೀ ಮೋಹನ್ ಕೆ.ಎನ್ ಮತ್ತು ಇತರರು ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ: 536:03 ಹಾಗೂ 562:03 ಅನ್ನು ಸಲ್ಲಿಸಿ ಮೇಲ್ಕಂಡ ನಿಯಮಗಳ ಸಿಂಧುತ್ವವನ್ನು ಪ್ರಶ್ನಿಸಿದ್ದು ಸರ್ವೋಚ್ಚ ನ್ಯಾಯಾಲಯವು ದಿನಾಂಕ: 12.12.2003 ರಂದು ತನ್ನ ಮಧ್ಯಂತರ ಆದೇಶದ ಮೇಲ್ಕಂಡ ನಿಯಮಗಳಿಗೆ ತಡೆಯಾಜ್ಞೆಯನ್ನು ನೀಡಿದೆ. ಈ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ಮೇಲ್ಕಂಡ ವಿಶೇಷ ನಿಯಮಗಳಡಿ ಮುಂದಿನ ಆದೇಶದವರೆಗೆ ಯಾವುದೇ ನೇಮಕಾತಿ ಮಾಡಬಾರದೆಂದು ದಿನಾಂಕ: 23.12.2003ರ ಸುತ್ತೋಲೆ ಸಂಖ್ಯೆ: ಸಿಯುಸಿ: 171:ಸನೆ: 2003ರಲ್ಲಿ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸರ್ವೋಚ್ಚನ್ಯಾಯಾಲಯದಲ್ಲಿರುವ ಮೇಲ್ಕಂಡ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಆಕ್ಷೇಪಣೆ ಅರ್ಜಿಯನ್ನು ಸಲ್ಲಿಸಲಾಗಿದ್ದು, ತಡೆಯಾಜ್ಞೆಯನ್ನು ತೆರವುಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆ. ಆದುದರಿಂದ ಸರ್ವೋಚ್ಚ ನ್ಯಾಯಾಲಯವು ಮೇಲ್ಕಂಡ ಪ್ರಕರಣಗಳಲ್ಲಿ ನೀಡುವ ಅಂತಿಮ ತೀರ್ಪನ್ನು ನಿರೀಕ್ಷಿಸಲಾಗಿದೆ. ತೀರ್ಪು ಬಂದ ನಂತರ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ಅದರ ಜೊತೆಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು, ಪಾಟೀಲರವರು ಪ್ರಸ್ತಾಪ ಮಾಡಿದಂತೆ ಈ ಸರ್ವೋಚ್ಚ ನ್ಯಾಯಾಲಯದಿಂದ ತೀರ್ಪು ಬರುವುದರೊಳಗೆ ವಿಳಂಬವೇನಾದರೂ ಆದರೆ ಆರೋಗ್ಯ ಇಲಾಖೆಯಲ್ಲಿ ಆ ಜನರನ್ನೇ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿದಂತಹ ಒಂದು ಆದೇಶವಿದೆ. ಅದನ್ನೂ ಕೂಡ ಬೇರೆಡೆಗೆ ಅನ್ವಯಿಸಬೇಕೆನ್ನುವ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ, ಅದರ ಕಡೆಗೆ ತೀವ್ರ ಗಮನವನ್ನು ಕೂಡ ಕೊಡುತ್ತದೆ.